# ಅಂಗೈಯಲ್ಲಿ ಮಾಯಾಲೋಕ!

ಕೈಚಳಕ, ಕಣ್ಣುಕಟ್ಟು, ಮಾಯ ಮಂತ್ರ ಎಂದೆಲ್ಲ ಕರೆಸಿಕೊಳ್ಳುವ ಜಾದೂ ವಿದ್ಯೆ ಬರಿಗೈಯಲ್ಲಿ ಕಿನ್ನರ ಲೋಕವನ್ನು ತೆರೆದಿಡುವ ಮಾಂತ್ರಿಕ ತಂತ್ರ. ಗಂಡನ್ನು ಹೆಣ್ಣನ್ನಾಗಿ, ಹೆಣ್ಣನ್ನು ಗಂಡನ್ನಾಗಿ ಮಾಡುವ ಕೈಚಳಕ, ವ್ಯಕ್ತಿಯನ್ನು ನಿರ್ಜೀವ ಗೊಂಬೆಯನ್ನಾಗಿ ಮಾಡಬಲ್ಲದು. ಅದೇ ಗೊಂಬೆಯನ್ನು ಪ್ರಾಣಿ- ಪಕ್ಷಿಯನ್ನಾಗಿ ಪರಿವರ್ತಿಸಿ ಪ್ರೇಕ್ಷಕರನ್ನು ದಿಗ್ಮೂಢರನ್ನಾಗಿಸುವುದು ಪರಂಪರಾಗತ ವೃತ್ತಿ. ಇಂತಹ 'ಮಾಯ' ಕಲೆ. ವಿಚಾರಶೀಲತೆಗೆ ಸವಾಲನ್ನು ಒಡ್ಡುವ ಕೌಶಲ್ಯ ಪೂರ್ಣ ಕಲೆ! ಅದನ್ನೇ ಮ್ಯಾಜಿಕ್ ಎಂದು ಕರೆಯುವುದು.

ಬಣ್ಣ ಬಣ್ಣದ ಬಟ್ಟೆ ತೊಟ್ಟು, ವೀಕ್ಷಕರಲ್ಲಿ ನಗೆ ಬುಗ್ಗೆಯನ್ನು ಎಬ್ಬಿಸುವ ಚಾಣಕ್ಷತೆ ಮಾಯಾವಿದ್ಯೆ ಕಲಾವಿದನಿಗೆ ಕರಗತವಾಗಿರುತ್ತದೆ. ಅನೇಕ ಕಲಾವಿದರು ಹಲವು ಬಗೆಯ ಕೌತುಕವಾದ ಸಾಹಸಗಳನ್ನು ಪ್ರದರ್ಶಿಸುತ್ತಾರೆ. ಗಾಜಿನ ಮೇಲೆ ಮಲಗುವುದು, ಬಂಡೆಗಲ್ಲನ್ನು ಕೈಯಲ್ಲೇ ಗುದ್ದಿ ಪುಡಿ ಪುಡಿ ಮಾಡುವುದು, ಸೈಕಲ್‌ನ್ನು ಹಲ್ಲಲ್ಲಿ ಕಚ್ಚಿ ಎಳೆಯುವುದು, ಕಾರನ್ನು ಕೂದಲಿಗೆ ಕಟ್ಟಿ ಎಳೆಯುವುದು- ಇಂತಹ ಅಸಾಧಾರಣ ಸಾಹಸಗಳು ನೋಡುಗರ ಚಪ್ಪಾಳೆಯ ಪುರಸ್ಕಾರಕ್ಕೆ ಕಲಾವಿದ ಪುಳಕಿತಗೊಳ್ಳುತ್ತಾನೆ.

ಮಾಯಾ ಕಲೆಯನ್ನು ಮೈಗೂಡಿಸಿಕೊಂಡಿರುವ ನಾಗೇಂದ್ರ ಪ್ರಸಾದ್ ಹೊಟ್ಟೆಪಾಡಿಗಾಗಿ ತನ್ನ ವೃತ್ತಿಯನ್ನು ಸೀಮಿತಗೊಳಿಸದೇ ಸಾಮಾಜಿಕ ಜಾಗೃತಿಗೆ ಅದನ್ನು ಧಾರೆಯೆರೆಯುತ್ತಿದ್ದಾರೆ. ಇವರು ಪ್ರಸಿದ್ಧ ಜಾದೂ ಕುಟುಂಬ ಒಂದರ ನಾಲ್ಕನೆಯ ತಲೆಮಾರಿಗೆ ಸೇರಿದವರು. ಅವರ ಅಜ್ಜನಿಂದ ತಂದೆ ಕಲಿತು ಜಾದೂ ವಿದ್ಯೆಯಲ್ಲಿ ಪ್ರಾವಿಣ್ಯರಾಗಿದ್ದರು. ಅವರ ಅಜ್ಜ ಚಿನ್ನಪ್ಪ ಶರ್ಮ ಕೂಡ ಜಾದು ಕಲೆಯನ್ನೇ ಪ್ರಸಾರ ಮಾಡಿದವರು. ಅವರು ತಮ್ಮ ತಂದೆ ನರಸಿಂಗ್ ರಾವ್ ಅವರಿಂದ ಕಲೆಯನ್ನು ಕಲಿತಿದ್ದರು. ನಂತರ ತಮ್ಮ ಮಗ ಡಾ.ಪಾಂಡುರಂಗ ರಾವ್‌ರಿಗೆ ವಿದ್ಯೆಯನ್ನು ಕಲಿಸಿದರು. ಪಾಂಡುರಂಗ ರಾವ್ ವೃತ್ತಿಯಿಂದ ವೈದ್ಯರಾಗಿದ್ದರೂ ಪ್ರವೃತ್ತಿಯಿಂದ ಒಬ್ಬ ಜಾದೂಗಾರರನ್ನಾಗಿ ಹೆಸರು ಗಳಿಸಿದ್ದರು. ತಂದೆಯ ಪ್ರತಿಭೆ ಈಗ ನಾಗೇಂದ್ರ ಪ್ರಸಾದ್‌ರಲ್ಲೂ ಹರಿದುಬಂದಿದೆ. ಇವರಿಗೆ ಅದೇ ವೃತ್ತಿ.



ನಾಗೇಂದ್ರ ಪ್ರಸಾದ್

ಮೈಸೂರಿನ ಪ್ರಸಿದ್ಧ ಜಗನ್ಮೋಹನ ಅರಮನೆ ಮೈದಾನದಲ್ಲಿ 1982ರಲ್ಲಿ ಮೊದಲ ಬಾರಿಗೆ ತಮ್ಮ ಜಾದೂ ಕಾರ್ಯಕ್ರಮವನ್ನು ನೀಡುವ ಮೂಲಕ ನಾಗೇಂದ್ರ ಪ್ರಸಾದ್ ಜಾದೂ ಜಗತ್ತಿಗೆ ಕಾಲಿಟ್ಟವರು. ನಿರಂತರವಾಗಿ 30 ವರ್ಷಗಳ ಕಾಲ ಜಾದೂ ಜಾಗೃತಿ ಮೂಡಿಸುತ್ತಲೇ ಬಂದಿದ್ದಾರೆ. ಅವರು ಸಮಾಜದ ಆರೋಗ್ಯಕ್ಕೆ ತಮ್ಮನ್ನು ಮುಡಿಪಾಗಿ ಇಟ್ಟಿದ್ದಾರೆ. ಅವರನ್ನು ಪರಿಸರ ಪ್ರೇಮಿ, ಆರೋಗ್ಯ ರಕ್ಷಕ ಎಂದೇ ಹೇಳಬೇಕು. ಅವರು ತಮ್ಮ ಕಲೆಯ ಮೂಲಕ ರಂಜಿಸುವ ಜೊತೆಗೆ ಸಾಮಾಜಿಕ ಜಾಗೃತಿ ಮೂಡಿಸುತ್ತಾರೆ. ಸಾರ್ವಜನಿಕ ಧೂಮಪಾನದಿಂದ ಆಗಬಹುದಾದ ಅನಾಹುತಗಳ ಬಗ್ಗೆ ತಮ್ಮ ಮೋಡಿ ವಿದ್ಯೆಯಲ್ಲಿಯೇ ಪ್ರೇಕ್ಷಕರಿಗೆ ಮನದಟ್ಟು ಮಾಡಿಸುತ್ತಾರೆ. 2001ರಿಂದಲೇ 'ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಬೇಕು' ಎಂದು ಒತ್ತಾಯಿಸುತ್ತಾ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿರುವುದು ಅವರ ಸಾಮಾಜಿಕ ಕಾಳಜಿಯ ಪ್ರತೀಕ.

### ವೈಜ್ಞಾನಿಕ ವಿಶ್ಲೇಷಣೆ

ಕೊಳೆಗೇರಿ, ಜನದಟ್ಟಣೆ ಪ್ರದೇಶದ ಗಲ್ಲಿಗಲ್ಲಿಗಳಲ್ಲಿಯೇ ತಮಗೊಂದು ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುವ ಇವರು, ಡೆಂಗ್ಯೂ, ಚಿಕುನ್‌ಗುನ್ಯಾದಂತಹ ಕಾಯಿಲೆಯಿಂದ ದೂರ ಇರುವ ಬಗ್ಗೆ ಕಾರ್ಯಕ್ರಮ ನೀಡುತ್ತಾರೆ. ಸೊಳ್ಳೆಗಳ ನಿರ್ಮೂಲನೆಗೆ ನೀರು ನಿಲ್ಲದಂತೆ ಹೇಗೆ ನೋಡಿಕೊಳ್ಳಬೇಕು ಎನ್ನುವ ಇವರು ಅದಕ್ಕಾಗಿ ವೈಜ್ಞಾನಿಕ ವಿಶ್ಲೇಷಣೆ ನೀಡುತ್ತಾರೆ. ನೀರಿನಲ್ಲಿ ತಮ್ಮ ವಂಶಾಭಿವೃದ್ಧಿಯನ್ನು ಮಾಡಿಕೊಳ್ಳುವ ಸೊಳ್ಳೆಗಳೇ ಡೆಂಗ್ಯೂ ವೈರಸ್ ಪ್ರಸರಿಸುತ್ತವೆ. ಮಾರಣಾಂತಿಕ ಭೀತಿಯನ್ನು ಹುಟ್ಟಿಸಿರುವ ಡೆಂಗ್ಯೂ ಜ್ವರ ಪತ್ತೆ ಹಚ್ಚುವಷ್ಟರಲ್ಲಿಯೇ ರೋಗಿ ಚಿಂತಾಜನಕ ಸ್ಥಿತಿ ತಲುಪುತ್ತಾನೆ. ಅದಕ್ಕೆ ಮುಂಜಾಗ್ರತೆಯೇ ಸಾರ್ವಕಾಲಿಕ ಮದ್ದು ಎಂಬುದನ್ನು ಸಾರ್ವತ್ರಿಕರಿಗೆ ತಿಳಿ ಹೇಳುತ್ತಾರೆ.

ಸಾಮಾಜಿಕ ಸ್ವಾಸ್ಥ್ಯವೆ ತಮ್ಮ ಧ್ಯೇಯ ಎನ್ನುವ ಇವರು ಆಸ್ಪತ್ರೆ, ಜೈಲು, ವೃದ್ಧಾಶ್ರಮ, ಅನಾಥಾಶ್ರಮದ ಮಕ್ಕಳಿಗೆ ಉಚಿತವಾಗಿ ಕಾರ್ಯಕ್ರಮ ನೀಡುತ್ತಾರೆ. ಆ ಮೂಲಕ ಅಸಹಾಯಕರಿಗೆ ಭರವಸೆಯ ನೆರವನ್ನು ನೀಡುವ ಮೂಲಕ ಆತ್ಮವಿಶ್ವಾಸವನ್ನು ತುಂಬುತ್ತಾ ಬಂದಿದ್ದಾರೆ. ಕ್ಯಾನ್ಸರ್ ಪೀಡಿತರಲ್ಲಿ ಸಾಮಾನ್ಯವಾಗಿ ಮೂಡುವ ಜಿಗುಪ್ಸೆಯನ್ನು ದೂರ ಮಾಡಿ ಉಳಿದಿರುವ ತಮ್ಮ ಬದುಕಿನಲ್ಲಿ ಉಲ್ಲಾಸದಾಯಕವಾಗಿ ಕಳೆಯುವಂತೆ ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಕಿದ್ವಾಯಿ ಆಸ್ಪತ್ರೆ ಆವರಣದಲ್ಲಿ ನೀಡುತ್ತಾ ಬಂದಿದ್ದಾರೆ. ಜತೆಗೆ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸುತ್ತಾರೆ.

ಸತ್ತ ನಂತರ ಪಂಚಭೂತಗಳಲ್ಲಿ ಲೀನವಾಗುವ ದೇಹ ನಿಷ್ಪ್ರಯೋಜಕ ಎಂಬುದನ್ನು ಬಲವಾಗಿ ಪ್ರತಿಪಾದಿಸುವ ಪ್ರಸಾದ್, ದೇಹದಾನಕ್ಕೆ ಪ್ರಚೋದಿಸುತ್ತಾರೆ. ಅದಕ್ಕಾಗಿ ವಿಕ್ಟೋರಿಯ ಆಸ್ಪತ್ರೆಯ ಹಿರಿಯ ವೈದ್ಯ ಡಾ.ದೇವದಾಸ್ ಅವರ ನೆರವನ್ನು ಪಡೆದು ಅನೇಕ ಜನರ ದೇಹದಾನ ನೋಂದಾವಣೆಯನ್ನು ಮಾಡಿಸಿದ್ದಾರೆ. ಇವರ ಈ ಕೆಲಸಕ್ಕೆ ನೆರವಾಗುವುದು ಅವರ ಮ್ಯಾಜಿಕ್ ಕಲೆ. (ಸಂಪರ್ಕ: 080-22236921 / 22296399 / ಅಥವಾ 98450-72042)

■ ರಾಘು